## ಕರ್ನಾಟಕ ಸರ್ಕಾರದ ನಡವಳಿಗಳು

## ಜಲ ಸಂಪನ್ಮೂಲ ಇಲಾಖೆ

ವಿಷಯ:- ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸಾಲ ಸಹಾಯದ ಕರ್ನಾಟಕ ಸಮಗ್ರ ಮತ್ತು ಸಮರ್ಥನೀಯ ಜಲಸಂಪನ್ಮೂಲ ನಿರ್ವಹಣೆ ಬಂಡವಾಳ ಕಾರ್ಯಕ್ರಮ (KISWRMIP) Tranche-2 ಅಡಿಯಲ್ಲಿ ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಯ ರೂ.456.63 ಕೋಟಿಗಳ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರ ಪತ್ರ ಸಂಖ್ಯೆ:ಕನೀನಿ/ಕೆಐಎಸ್‌ಡಬ್ಲ್ಯೂಆರ್‌ಎಂಐಪಿ/ ಟಿ-2/ ವಿಎನ್‌ಸಿ/ ಎಇ-15/ 2017-18/ 2958 ದಿನಾಂಕ:31.08.2018.
2. ಸರ್ಕಾರದ ಆದೇಶಸಂಖ್ಯೆ: ಜಸಂಇ 107 ಎಂಟಿಪಿ 2012, ದಿನಾಂಕ:21.01.2013.
3. ಸರ್ಕಾರದ ಆದೇಶ ಸಂಖ್ಯೆ: ಜಸಂಇ 31 ಎಂಟಿಪಿ 2015, ದಿನಾಂಕ:24.06.2016

---***---

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ರವರು ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿ ಕೈಗೊಳ್ಳುವುದರಿಂದ ನೀರನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹುದಾಗಿದೆ ಎಂದು ತಿಳಿಸುತ್ತಾ, 2003ರ ಮಾಸ್ಟರ್ ಪ್ಲಾನ್ ಅನ್ವಯ ಕಾಲುವೆ ಜಾಲವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಕಾಲುವೆಗಳನ್ನು ಆಧುನೀಕರಣಗೊಳಿಸುವುದು ಅವಶ್ಯವಿರುತ್ತದೆಂದು ತಿಳಿಸಿರುತ್ತಾರೆ ಹಾಗೂ ಇದರಿಂದ ನೀರಿನ ಬಳಕೆಯನ್ನು ನಿಯಂತ್ರಿಸಿ ಉಳಿತಾಯವಾಗುವ ಪ್ರಮಾಣವನ್ನು ಇತರೆ ಬರಪೀಡಿತ ಪ್ರದೇಶಗಳಲ್ಲಿ ಉಪಯೋಗಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ, ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಗಳ ರೂ.255.00 ಕೋಟಿಗಳ ಅಂದಾಜಿಗೆ ಹಾಗೂ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುತ್ತಾ, ಸದರಿ ಯೋಜನಾ ವರದಿಯನ್ನು ಹೂಡಿಕೆಯ ತೀರುವಳಿಗಾಗಿ ಕೇಂದ್ರ ಜಲ ಆಯೋಗ ಭಾರತ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ, ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸಾಲ ಸಹಾಯದ ಕರ್ನಾಟಕ ಸಮಗ್ರ ಮತ್ತು ಸಮರ್ಥನೀಯ ಜಲಸಂಪನ್ಮೂಲ ನಿರ್ವಹಣೆ ಬಂಡವಾಳ ಕಾರ್ಯಕ್ರಮ (KISWRMIP) Tranche-2 ಅಡಿಯಲ್ಲಿ 2013-14ರ ದರಪಟ್ಟಿಯನ್ವಯ ತಯಾರಿಸಿದ ವಿಜಯನಗರ ಕಾಲುವೆಗಳ ಆಧುನೀಕರಣದ ರೂ.432.55 ಕೋಟಿಗಳ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

ಮುಂದುವರೆದು, 2017-18ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾಗಿರುವ, ವಿಜಯನಗರ ಕಾಲುವೆಗಳ ಪರಿಷ್ಕೃತ ವಿವರವಾದ ಯೋಜನಾ ವರದಿಗೆ, ವರದಿಯ ಮೊತ್ತವನ್ನು ಕೇಂದ್ರ ಜಲ ಆಯೋಗವು ರೂ.456.63 ಕೋಟಿಗಳಿಗೆ ಅಂತಿಮಗೊಳಿಸಿದ್ದು, ಸದರಿ ಮೊತ್ತಕ್ಕೆ ರಾಜ್ಯ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆಂದು ತಿಳಿಸುತ್ತಾ, ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸಾಲ ಸಹಾಯದ ಕರ್ನಾಟಕ ಸಮಗ್ರ ಮತ್ತು ಸಮರ್ಥನೀಯ ಜಲಸಂಪನ್ಮೂಲ ನಿರ್ವಹಣೆ ಬಂಡವಾಳ ಕಾರ್ಯಕ್ರಮ (KISWRMIP) Tranche-2 ಅಡಿಯಲ್ಲಿ 2017- 18ನೇ ಸಾಲಿನ ದರಪಟ್ಟಿನ್ವಯ ತಯಾರಿಸಲಾಗಿರುವ, ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಯ ರೂ.456.63 ಕೋಟಿಗಳ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ರವರು ಕೋರಿರುತ್ತಾರೆ.

...2

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 107 ಎಂಟಿಪಿ 2017 ಬೆಂಗಳೂರು,**
**ದಿನಾಂಕ: 04.10.2019.**

ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸಾಲ ಸಹಾಯದ ಕರ್ನಾಟಕ ಸಮಗ್ರ ಮತ್ತು ಸಮರ್ಥನೀಯ ಜಲಸಂಪನ್ಮೂಲ ನಿರ್ವಹಣೆ ಬಂಡವಾಳ ಕಾರ್ಯಕ್ರಮ (KISWRMIP) Tranche-2 ಅಡಿಯ ಒಟ್ಟಾರೆ ಪರಿಷ್ಕೃತ ಯೋಜನಾ ಮೊತ್ತವಾದ ರೂ.884.52 ಕೋಟಿಗಳಿಗೆ (including civil works and soft components) ಮೀರಬಾರದೆಂಬ ಷರತ್ತಿನೊಂದಿಗೆ 2017-18ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾಗಿರುವ, ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಯ ರೂ.456.63 ಕೋಟಿಗಳ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 529 ಎಫ್‌ಸಿ-1/2018 ದಿನಾಂಕ:21.08.2019ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಶ್ರೀಹರಿ ಎಸ್.ಆರ್)**
**ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1),**
**ಜಲ ಸಂಪನ್ಮೂಲ ಇಲಾಖೆ.**

ಪ್ರತಿಯನ್ನು:-

1. ಪ್ರಧಾನ ಮಹಾಲೇಖಾಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ), ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು 01.
2. ಪ್ರಧಾನ ಮಹಾಲೇಖಾಪಾಲರು, (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು 01.
3. ಪ್ರಧಾನ ಮಹಾಲೇಖಾಪಾಲರು, (ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ), ಕರ್ನಾಟಕ ಬೆಂಗಳೂರು 01.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು.
5. ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿಗಳು (ಸಚಿವ ಸಂಪುಟ) ಪ್ರಕರಣ ಸಂ:ಸಿ:520/2019 ದಿನಾಂಕ:18.09.2019 ರನ್ವಯ ಕಳುಹಿಸಿದೆ.
7. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
8. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ, ಆರ್ಥಿಕ ಕೋಶ) ವಿಧಾನ ಸೌಧ ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.